ಇಲ್ಲದಿದ್ದರೆ ಯಾರಿಗೂ ಮಾರ್ಯಾದೆ ಬರುವ ಹಾಗೆ ಇಲ್ಲ. ಪ್ರತಿ ತಾಲ್ಲೂಕಿನಲ್ಲಿ ಈ ಕೆಲಸವನ್ನೂ ಆತ ನಡೆಸುತ್ತಿದ್ದಾನೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಇಬ್ಬರು ಶಾಸಕರು ಮಾಡಿರತಕ್ಕಂಥದ್ದು ಆಪಾದನೆ ಏನು ಇದೆ, ಇದು ನಿಜವಾಗಿಯೂ ಕೂಡ ತಲೆತಗ್ಗಿಸುವಂಥದ್ದು. ಯಾವುದೇ ಒಬ್ಬ ಅಧಿಕಾರಿ ಪರಿಹಾರ ಕೊಡುವ ಸಂದರ್ಭದಲ್ಲಿಯೂ ಕೂಡ ಈ ರೀತಿಯಾದ ಅವ್ಯವಹಾರ ಮತ್ತು ಭ್ರಷ್ಟಾಚಾರಕ್ಕೆ ಒಳಗಾದರೆ ಇದನ್ನು ಸರ್ಕಾರ ಸಹಿಸುವುದಿಲ್ಲ. ಈ ದಿವಸವೇ ನಾನು ಜಿಲ್ಲಾಧಿಕಾರಿಗಳಿಗೆ ಫೋನ್ ಮೂಲಕ ಎನ್‌ಕ್ವೈರಿ ಮಾಡಿ ರೆಕಾರ್ಡ್ಸ್‌ಗಳನ್ನೆಲ್ಲಾ ತಮ್ಮ ವಶಕ್ಕೆ ತೆಗೆದುಕೊಳ್ಳಬೇಕು ಎಂದು ಹೇಳುತ್ತೇವೆ. ಮಾನ್ಯ ನಮ್ಮ ನೀರಾವರಿ ಸಚಿವರು ಬಂದನಂತರ ಅಥವಾ ರೆವಿನ್ಯೂ ಸಚಿವರು ಬಂದನಂತರ ಆ ಅಧಿಕಾರಿಯ ಬದಲಾವಣೆಯೊ ಮತ್ತೊಂದೊ ಅದರ ಬಗ್ಗೆ ವಿಚಾರಣೆ ನಡೆಸತಕ್ಕಂಥದ್ದೋ ಆ ಕ್ರಮವನ್ನು ಸರ್ಕಾರದ ವತಿಯಿಂದ ಕೈಗೊಳ್ಳುತ್ತೇವೆ.

12.50 ಪಿ.ಎಂ

(2) ಮೈಸೂರಿನ ಕ್ರೀಡಾಂಗಣ ಕಾಮಗಾರಿ ಗುತ್ತಿಗೆದಾರರಿಗೆ ಹಣ ನೀಡದೆ ಇರುವುದು.

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ಉಪಾಧ್ಯಕ್ಷರೆ, ಮೈಸೂರು ನಗರದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಇಂಡೋರ್ ಸ್ಟೇಡಿಯಂ ನಿರ್ಮಿಸಲಾಗಿದೆ. ಭಾರತ ಸರ್ಕಾರದ ಸ್ವಾಮ್ಯಕ್ಕೆ ಸೇರಿರುವ ಹಿಂದುಸ್ತಾನ್ ಸ್ಟೀಲ್ ವರ್ಕ್ಸ್ ಕನ್‌ಸ್ಟ್ರಕ್ಷನ್ ಲಿಮಿಟೆಡ್‌ಗೆ ಕ್ರೀಡಾಂಗಣ ನಿರ್ಮಿಸಲು ಗುತ್ತಿಗೆ ನೀಡಲಾಗಿತ್ತು. ಆದರೆ, ಇವರಿಂದ ಹೆಚ್.ಆರ್.ಕೃಷ್ಣಮೂರ್ತಿ ಎನ್ನುವವರು ಉಪ ಗುತ್ತಿಗೆ ಪಡೆದು ಕ್ರೀಡಾಂಗಣದ ಸಂಪೂರ್ಣ ಕೆಲಸ ಮಾಡಿ ಮುಗಿಸಿದ್ದಾರೆ. ಈಗಾಗಲೇ ಸದರಿ ಕ್ರೀಡಾಂಗಣದ ಉದ್ಘಾಟನೆಯಾಗಿ ಒಂದು ವರ್ಷವಾಗಿದ್ದರೂ ಕ್ರೀಡಾಂಗಣದ ಕಾಮಗಾರಿ ಮುಗಿಸಿರುವ ಎಚ್.ಆರ್.ಕೃಷ್ಣಮೂರ್ತಿಯವರಿಗೆ ಇಲ್ಲಿಯವರೆವಿಗೂ ಹಣ ಪಾವತಿಯಾಗಿಲ್ಲ. ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಿರುವ ಹಿನ್ನೆಲೆಯಲ್ಲಿ ಸರ್ಕಾರ ದೊಡ್ಡ ಸಾಧನೆ ಮಾಡಿದೆಯೆಂದು ತಾವು ಬಜೆಟ್‌ನಲ್ಲೂ ಸಹ ಹೇಳಿದ್ದೀರಿ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಅಲ್ಲದೆ, ಸರ್ಕಾರ ಕ್ರೀಡಾ ಸಮುಚ್ಛಯಗಳನ್ನು ನಿರ್ಮಾಣ ಮಾಡಿದೆಯೆಂಬ ವಿಚಾರವನ್ನೂ ಸಹ ತಿಳಿಸಿದ್ದು, ಗುತ್ತಿಗೆದಾರರಿಗೆ ಪೇಮೆಂಟ್ ಮಾಡಿಲ್ಲ. ಯಾರದೋ ದುಡ್ಡಿನಲ್ಲಿ ನಾವು ಸಾಧನೆ ಮಾಡಿದ್ದೇವೆಂದು ಸರ್ಕಾರ ಹೇಳಿಕೊಳ್ಳುವುದು ಹೆಚ್ಚುಗಾರಿಕೆಯಲ್ಲ. ಗುತ್ತಿಗೆದಾರರು ಒಂದು ವರ್ಷದಿಂದ ತಮ್ಮ ಮನೆ-ಮಠ

ಕಳೆದುಕೊಂಡು, ಸಾಲ ತೆಗೆದುಕೊಂಡು ಕಟ್ಟಡ ಕಟ್ಟಿ ಪೂರ್ತಿಗೊಳಿಸಿರುವುದಕ್ಕೆ ಸಾಲಗಾರರು ಈಗ ಅವರಿಗೆ ಹಿಂಸೆ ಕೊಡುತ್ತಿದ್ದಾರೆ. ಆದುದರಿಂದ, ಅವರಿಗೆ ಯಾವಾಗ ಪೇಮೆಂಟ್ ಕೊಡುತ್ತೀರಿ? ಕಟ್ಟಡ ನಿರ್ಮಾಣ ಕೆಲಸ ಮುಗಿಸಿ ಒಂದು ವರ್ಷವಾಗಿದ್ದರೂ ಗುತ್ತಿಗೆದಾರರಿಗೆ ಪೇಮೆಂಟ್ ಕೊಡುವುದಿಲ್ಲವೆಂದರೆ ಅವರು ಹೇಗೆ ಬದುಕುತ್ತಾರೆ? 'ನಮಗೆ ಹಣಕ್ಕೇನೂ ಕೊರತೆಯಿಲ್ಲ, ಸರ್ಕಾರ ಹಣಕಾಸು ಸ್ಥಿತಿಯಲ್ಲಿ ಬಹಳಷ್ಟು ಉತ್ತಮವಾಗಿದೆ' ಎಂಬ ಮಾತನ್ನು ಹೇಳುತ್ತಿದ್ದೀರಿ. ಆದುದರಿಂದ, ದಯಮಾಡಿ ಅವರಿಗೆ ಯಾವಾಗ ಹಣ ಕೊಡುತ್ತೀರೆಂಬುದನ್ನು ಖಚಿತವಾಗಿ ತಿಳಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಸುಮಾರು 130 ಕೋಟಿ ರೂಪಾಯಿಗಳ ರಾಷ್ಟ್ರೀಯ ಕ್ರೀಡಾ ಯೋಜನೆಯನ್ನು ಬೆಂಗಳೂರಿನಲ್ಲಿ ಯಶಸ್ವಿಯಾಗಿ ನಾವು ನಡೆಸಿದ್ದೇವೆ. ಅನೇಕ ಸಂದರ್ಭಗಳಲ್ಲಿ ನಾವು ಸರ್ಕಾರದ ಆರ್ಥಿಕ ಪರಿಸ್ಥಿತಿ ಚೆನ್ನಾಗಿದೆಯೆಂದರೆ ಯಾವಾಗಲೂ ಕೂಡ ಪ್ರತಿಯೊಂದಕ್ಕೂ ಹಣವನ್ನು ಸಂಪೂರ್ಣವಾಗಿ ಕೊಡಬೇಕೆನ್ನುವಷ್ಟು ತೃಪ್ತಿಕರವಾಗಿ ಇರುವುದಿಲ್ಲ. ಒಂದು ಕಡೆ ಹಣ ಬರುತ್ತಿರುತ್ತದೆ, ಇನ್ನೊಂದು ಕಡೆ ಬೇರೆ ಬೇರೆ ಬಾಬ್ತುಗಳಿಗೆ ಹಂಚಿಕೆಯಾಗಬೇಕಾಗಿರುತ್ತದೆ. ಒಂದು ಕೌಟುಂಬಿಕ ವರ್ಗದಲ್ಲಿ ಯಾವ ರೀತಿಯಾದ ವ್ಯವಸ್ಥೆ ಇರುತ್ತದೆಯೋ ಸರ್ಕಾರದಲ್ಲಿಯೂ ಅದೇ ರೀತಿ ಇರುತ್ತದೆ. ಗುತ್ತಿಗೆದಾರರಿಗೆ ಕಳೆದ ಒಂದು ವರ್ಷದಿಂದ ಹಣ ಕೊಟ್ಟಿಲ್ಲವೆಂದು ತಾವು ಏನು ಹೇಳಿದ್ದೀರಿ, ಅದರ ಬಗ್ಗೆ ನನಗೂ ಕೂಡ ಸಹಾನುಭೂತಿ ಇದೆ. ಆದರೆ, ಮುಂದೆ ಹಣ ಕೊಡತಕ್ಕಂಥ ಸಂದರ್ಭದಲ್ಲಿ ಇವರೆಲ್ಲರ ಬಗ್ಗೆ ಯೋಚನೆ ಮಾಡಿ ಹಣ ಕೊಡಿಸತಕ್ಕಂಥ ವ್ಯವಸ್ಥೆ ಮಾಡುತ್ತೇವೆ.

(3) ಗುಬ್ಬಿ ಪಟ್ಟಣದಲ್ಲಿ ಕುಡಿಯುವ ನೀರಿನ ಕೊರತೆ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) (ಜೆ.ಎಸ್.ಶಿವನಂಜಪ್ಪನವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಗುಬ್ಬಿ ಪಟ್ಟಣ ಹಿಂದೆ ಪಂಚಾಯಿತಿಯಾಗಿದ್ದಾಗ ಅಲ್ಲಿ ಕುಡಿಯುವ ನೀರಿನ ಯೋಜನೆ ಪ್ರಾರಂಭವಾಗಿ, ಸುಮಾರು 18 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಅನುಷ್ಠಾನಕ್ಕೆ ತಂದು, ಯೋಜನೆಯಲ್ಲಿ ಬೋರ್‌ವೆಲ್ ಅನ್ನು ಡ್ರಿಲ್ ಮಾಡುವುದು, ಮತ್ತು ನೀರನ್ನು ಸರಬರಾಜು ಮಾಡುವುದು ಸೇರಿತ್ತು. ಈಗ ಸದರಿ ಪಟ್ಟಣವನ್ನು ಏಕಸ್ಮಾತ್ ಮುನಿಸಿಪಾಲಿಟಿಯಾಗಿ ಪರಿವರ್ತನೆ ಮಾಡುತ್ತೇವೆಂದು ಹೇಳಿ ಯೋಜನೆಯನ್ನು ನಿಲ್ಲಿಸಿದ್ದಾರೆ. ಸದರಿ ಯೋಜನೆಯನ್ನು ಇವೊತ್ತು ಜಿಲ್ಲಾ ಪಂಚಾಯತ್‌ನವರು ಮಾಡಬೇಕೇ? ಮುನಿಸಿಪಾಲಿಟಿಯವರು ಮಾಡಬೇಕೇ? ಎಂಬ ವಿಷಯ ನೆನೆಗುದಿಗೆ ಬಿದ್ದಿದ್ದು ಸುಮಾರು 2-3 ವರ್ಷಗಳಿಂದ ಗುಬ್ಬಿ ಪಟ್ಟಣದ ನಾಗರಿಕರಿಗೆ ಕುಡಿಯುವುದಕ್ಕೆ ನೀರಿಲ್ಲದ ಧರಣಿ, ಮುಷ್ಕರ ನಡೆಸುವುದರ ಮೂಲಕ